# ಕರ್ನಾಟಕ ವಿಧಾನ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 96(25) |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನವ ಮಂಗಳೂರು ಬಂದರಿನ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮವನ್ನು ಗುರುತಿಸಿರುವುದು ಅರಣ್ಯ ಇಲಾಖೆಯ ಗಮನಕ್ಕೆ ಬಂದಿದೆಯೇ; ವಸತಿ ಪ್ರದೇಶದ ಮರದ ಮಿಲ್ಲುಗಳನ್ನು ನಡೆಸಲು ನಿಯಮಾನುಸಾರ ಅನುಮತಿ ಇಲ್ಲದಿದ್ದಲ್ಲಿ, ಈ ನಿರಾಶ್ರಿತರಿಗೆ ಇರುವ ಗ್ರಾಮದಲ್ಲಿ ಮರದ ಮಿಲ್ಲುಗಳನ್ನು ಸ್ಥಾಪಿಸಲು ಯಾವ ನಿಯಮದ ಅನ್ವಯ ಅನುಮತಿಸಲಾಗಿದೆ; ಮರದ ಮಿಲ್ಲುಗಳನ್ನು ಪ್ರಾರಂಭಿಸಲು ಸಲ್ಲಿಸಬೇಕಾದ ದಾಖಲೆಗಳಾವುವು; (ವಿವರ ನೀಡುವುದು) | ನವ ಮಂಗಳೂರು ಬಂದರಿನ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮವನ್ನು ಗುರುತಿಸಿರುವ ಬಗ್ಗೆ ಮಂಗಳೂರು ಅರಣ್ಯ ವಿಭಾಗ ಕಛೇರಿಯಲ್ಲಿ ಯಾವುದೇ ದಾಖಲೆಗಳಿರುವುದಿಲ್ಲ.<br><br>ವಸತಿ ಪ್ರದೇಶದಲ್ಲಿ ಮರದ ಮಿಲ್ಲುಗಳನ್ನು ಸ್ಥಾಪಿಸಲು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 163 2(ಎ) ರನ್ವಯ ಹಾಗೂ ಮಂಗಳೂರು ಮಹಾನಗರ ಪಾಲಿಕೆಯ ಉದ್ದಿಮೆ ಪರವಾನಗಿಯ ಆಧಾರದ ಮೇಲೆ ಅನುಮತಿಸಲಾಗಿದೆ; ಮರದ ಮಿಲ್ಲುಗಳನ್ನು ಪ್ರಾರಂಭಿಸಲು ಅರ್ಜಿದಾರನು ಇಚ್ಛಿಸುವ ಜಾಗದ ವಿವರ, ನಗರ ಸಭೆ ವ್ಯಾಪ್ತಿಗೆ ಒಳಪಟ್ಟಲ್ಲಿ ನಿರಾಕ್ಷೇಪಣಾ ಪತ್ರ ಅಥವಾ ಉದ್ಯೋಗ ಪರವಾನಗಿ ಪತ್ರ, ಅಳವಡಿಸಲು ಇಚ್ಛಿಸಿರುವ ಯಂತ್ರಗಳ ಸಂಖ್ಯೆಯ ವಿವರ ಮತ್ತು ಅಶ್ವಶಕ್ತಿಯ ವಿವರಗಳು ಒಳಗೊಂಡ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ.<br><br>ಸದರಿ ಅರ್ಜಿಯನ್ನು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 163 2(ಎ) ಮತ್ತು 163 (5) ರನ್ವಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಛೇರಿಯಲ್ಲಿ ಕ್ಷೇತ್ರ ತಪಾಸಣೆ ಮಾಡಿ, ನಿಯಮಾನುಸಾರ ಅರ್ಹವಿದೆಯೇ ಎಂಬುದರ ಕುರಿತು ಪರಿಶೀಲಿಸಿ ಮುಂದಿನ ಕ್ರಮ ಮಾಡಲಾಗಿರುತ್ತದೆ.<br><br>ಶ್ರೀ ಟಿ ಎನ್ ಗೋದವರ್ಮನ್ ತಿರುಮಲ್ಪಾಡ್ ವಿರುದ್ಧ ಭಾರತ ಸರ್ಕಾರ ಮತ್ತಿತರರು ಪ್ರಕರಣದಲ್ಲಿ ರಿಟ್ ಅರ್ಜಿ (ಸಿವಿಲ್) ಸಂಖ್ಯೆ 202/1995 ರಲ್ಲಿ |

| | | |
|---|---|---|
| | | ಭಾರತದ ಸರ್ವೋಚ್ಚ ನ್ಯಾಯಾಲಯವು 05.10.2015ರಂದು ಹೊರಡಿಸಿದ ಆದೇಶದನ್ವಯ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ರಚಿಸಿರುವ "ಮರ ಆಧಾರಿತ ಕೈಗಾರಿಕೆಗಳು (ಸ್ಥಾಪನೆ ಮತ್ತು ನಿಯಂತ್ರಣ) ಮಾರ್ಗಸೂಚಿಗಳು 2016, ದಿನಾಂಕ 22ನೇ ಸೆಪ್ಟೆಂಬರ್ 2016" ಮತ್ತು ದಿನಾಂಕ 11ನೇ ಸೆಪ್ಟೆಂಬರ್ 2017ರ ತಿದ್ದುಪಡಿಯನ್ವಯ ರಚಿಸಲಾಗಿರುವ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ. |
| ಆ) | ಈ ವಸತಿ ಪ್ರದೇಶವು ಕಾಯ್ದಿರಿಸಿದ ಅರಣ್ಯ ಪ್ರದೇಶದಿಂದ ಅಥವಾ ಸಂರಕ್ಷಿತ ಅರಣ್ಯ ಪ್ರದೇಶದಿಂದ ಎಷ್ಟು ಕಿ.ಮೀ .ದೂರದಲ್ಲಿದೆ? ಈ ಪ್ರದೇಶದ 10ಕಿ.ಮೀ ವ್ಯಾಪ್ತಿಯಲ್ಲಿರುವ ಕಾಯ್ದಿರಿಸಿದ ಅರಣ್ಯ ಪ್ರದೇಶ ಅಥವಾ ಸಂರಕ್ಷಿತ ಅರಣ್ಯ ಪ್ರದೇಶಗಳಾವುವು; (ಹೆಸರಿನೊಂದಿಗೆ ಮಾಹಿತಿ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮದಲ್ಲಿರುವ ವಸತಿ ಪ್ರದೇಶವು ಕಲ್ಲ ಮುಡ್ಕೂರು ಮೀಸಲು ಅರಣ್ಯದಿಂದ 13.38 ಕಿ.ಮೀ ದೂರದಲ್ಲಿರುತ್ತದೆ. |
| ಇ) | ಕೃಷ್ಣಾಪುರ 5ನೇ ಬ್ಲಾಕಿನಲ್ಲಿರುವ ಆಶಾ ಮರದ ಮಿಲ್ಲು ರಸ್ತೆಯ ಇಕ್ಕೆಲಗಳಲ್ಲಿ ಮರದ ದಿಮ್ಮಿಗಳನ್ನು ರಾಶಿ ರಾಶಿ ಹಾಕುವ ಮೂಲಕ ಸಾರ್ವಜನಿಕರಿಗೆ ಮತ್ತು ವಾಹನ ಚಾಲಕರಿಗೆ ತೊಂದರೆಯುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಇಲಾಖೆ ಕೈಗೊಂಡ ಕ್ರಮಗಳೇನು; | ಕೃಷ್ಣಾಪುರದ 5ನೇ ಬ್ಲಾಕಿನಲ್ಲಿರುವ ಆಶಾ ಮರದ ಮಿಲ್ಲು ರಸ್ತೆಯ ಇಕ್ಕೆಲಗಳಲ್ಲಿ ಮರದ ದಿಮ್ಮಿಗಳನ್ನು ರಾಶಿ ಹಾಕುವ ಬಗ್ಗೆ ಸಾರ್ವಜನಿಕರಿಂದ ಮತ್ತು ವಾಹನ ಚಾಲಕರಿಂದ ಯಾವುದೇ ದೂರರ್ಜಿಗಳು ಮಂಗಳೂರು ವಿಭಾಗ ಕಛೇರಿಯಲ್ಲಿ ಸ್ವೀಕೃತಿಯಾಗಿರುವುದಿಲ್ಲ. |
| ಈ) | ಕೃಷ್ಣಾಪುರದ 5ನೇ ಬ್ಲಾಕಿನಲ್ಲಿರುವ ಮರದ ಮಿಲ್ಲು ವಸತಿ ಪ್ರದೇಶದಲ್ಲಿದೆಯೇ; ನವ ಮಂಗಳೂರು ಬಂದರಿನ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಗಳನ್ನು ಗುರುತಿಸಿರುವುದು ಅರಣ್ಯ ಇಲಾಖೆಯ ನಿಲುವೇನು?(ವಿವರ ನೀಡುವುದು) | ಕೃಷ್ಣಾಪುರದ 5ನೇ ಬ್ಲಾಕಿನಲ್ಲಿರುವ ಮರದ ಮಿಲ್ಲು ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಸತಿ ಪ್ರದೇಶದಲ್ಲಿದೆ;<br><br>ನವ ಮಂಗಳೂರು ಬಂದರು ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಪುರ ಮತ್ತು ಕಾಟಿಪಳ್ಳ ಗ್ರಾಮವನ್ನು ಗುರುತಿಸಿರುವ ಪ್ರಕ್ರಿಯೆಯು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡದೇ ಇರುವುದರಿಂದ, ಅರಣ್ಯ ಇಲಾಖೆಯು ಪ್ರತಿಕ್ರಿಯೆ ನೀಡಲು ಬರುವುದಿಲ್ಲ. |

ಸಂಖ್ಯೆ: ಅಪಜೀ 29 ಎಫ್‌ಡಿಪಿ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.